ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಎಂ ವಿ ಸಿ ನಂಃ **459/2024**

ಪಿ ಡಬ್ಲ್ಯು ಃ**-03**

ಸಾಕ್ಷಿದಾರರ ಹೆಸರು ಃ ಡಾ.ವಿಜಯ್ ಬಿ ಟಿ
ತಂದೆಯ ಹೆಸರು ಃ ಬಿ ಕೆ ತಿಪ್ಪೇಸ್ವಾಮಿ
ವಯಸ್ಸು ಃ **43** ವರ್ಷ
ಉದ್ಯೋಗ ಃ ವೈದ್ಯಾಧಿಕಾರಿಗಳು, ಎನ್ ಆರ್ ಪುರ.
ವಾಸಸ್ಥಳ ಃ ಶಿವಮೊಗ್ಗ.
ದಿನಾಂಕಃ **17/03/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಅರ್ಜಿದಾರರ ಪರ ಶ್ರೀ ಡಿ ಆರ್ ವಕೀಲರಿಂದಃ

ನಾನು ಸೆಪ್ಟೆಂಬರ್ 2018 ರಿಂದ ಇಲ್ಲಿಯವರೆಗೆ ನರಸಿಂಹರಾಜಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕೀಲು ಮತ್ತು ಮೂಳೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 15/05/2023 ರಂದು ರಸ್ತೆ ಅಪಘಾತದಲ್ಲಿ ಗಾಯಗೊಂಡ ಕಾರಣ ಶೀಲ ಇವರು ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರದಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಗುತ್ತಿ ಮಲ್ನಾಡ್ ಆಸ್ಪತ್ರೆಗೆ ಬಂದಿದ್ದು, ನಾನು ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ, ಅವರ ಎಡಭುಜದ ಮೂಳೆಗಳು ಮುರಿತಗೊಂಡಿದ್ದು, ದಿಃ 15/05/2023 ರಂದು ಶೀಲ ಇವರನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ ರಾಡನ್ನು ಅಳವಡಿಸಿರುತ್ತೇನೆ. ಸದರಿ ಶೀಲ ಇವರು ನಮ್ಮ ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಂತರ ಗಾಯಾಳುವಿಗೆ ನಾನು ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರದಲ್ಲಿ ನಿರಂತರ ಚಿಕಿತ್ಸೆಯನ್ನು ನೀಡಿರುತ್ತೇನೆ. ಸದರಿಯವರ ಎಡಭುಜಕ್ಕೆ ಅಳವಡಿಸಿದ ರಾಡನ್ನು ತೆಗೆಯಲು ಖಾಸಗಿ ಆಸ್ಪತ್ರೆಯಲ್ಲಿ ಸುಮಾರು 20 ಸಾವಿರ ರೂ. ಖರ್ಚಾಗಬಹುದು. ಸದರಿಯವರಿಗೆ ಆದಂತಹ ಗಾಯಗಳು ತೀವ್ರ ಸ್ವರೂಪದ ಗಾಯಗಳು ಆಗಿರುತ್ತದೆ. ಅರ್ಜಿದಾರರಿಗೆ ಉಂಟಾದ ಗಾಯದಿಂದ ಅವರು ತಮ್ಮ ಮಗುವಿನ ಲಾಲನೆ -ಪಾಲನೆ ಮತ್ತು ಪೋಷಣೆ ಮಾಡುವುದು ಕಷ್ಟವಾಗುತ್ತಿತ್ತು.

2. ಸಾಕ್ಷಿಯು ತಾವು ನೀಡಿದ ಅಂಗನ್ಯೂನತಾ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 21 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನುನಿಪಿ 21(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ತಾವು ನೀಡಿದ ಡಿಸ್ಚಾರ್ಜ್ ಸಮ್ಮರಿ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 8 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನುನಿಪಿ 8(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು 18 ಪುಟಗಳ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾಗಿ ನಿಪಿ 25 ಎಂದು ಗುರುತಿಸಲಾಯ್ತು.

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಸಿ ಓ ವೈ ವಕೀಲರ ಪರವಾಗಿ ಶ್ರೀ ಎಸ್ ಪಿ ವಕೀಲರಿಂದಃ</u>

ಅರ್ಜಿದಾರರು ಚಿಕಿತ್ಸೆಗಾಗಿ ನನ್ನ ಬಳಿ ಬಂದಾಗ ಅವರಿಗಾದ ಗಾಯ ಆಗ ತಾನೇ ಆದಂತಹ ಗಾಯ ಕಂಡುಬಂದಿರುತ್ತದೆ. ಅರ್ಜಿದಾರರು ನಮ್ಮ ಕ್ಲಿನಿಕ್ ಗೆ ಬರುವ ಪೂರ್ವದಲ್ಲಿ ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡು ಬಂದಿರುತ್ತಾರೆ. ಸದರಿಯವರು ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ಪರಿಶೀಲನೆ ಮಾಡಿರುತ್ತೇನೆ. ನಾನು ಮೊದಲ ಬಾರಿ ದಿಃ 15/05/2023 ರಂದು ಅರ್ಜಿದಾರರಿಗೆ ಚಿಕಿತ್ಸೆ ನೀಡಿದ್ದು ತದನಂತರ ನಿರಂತರ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆ ಇಟ್ಟಿರುವುದಿಲ್ಲ. ಅರ್ಜಿದಾರರು ಶಿವಮೊಗ್ಗ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದಿರುತ್ತಾರೆ ನಂತರ ಎನ್ ಆರ್ ಪುರದಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು. ನಾನು ಅಂಗನ್ಯೂನತಾ ಪ್ರಮಾಣ ಪತ್ರ ನೀಡುವ ಕಾಲಕ್ಕೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಉಂಟಾಗಿರುವುದಿಲ್ಲ, ಅವರು ಅಪಘಾತದಿಂದ ಆದ ಗಾಯದಿಂದ ಸಂಪೂರ್ಣವಾಗಿ ಗುಣಮುಖರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

2. ಅಂಗನ್ಯೂನತಾ ಪ್ರಮಾಣ ಪತ್ರದ ಪ್ರಕಾರ ಅರ್ಜಿದಾರರಿಗೆ ಈಗ ಯಾವುದೇ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಅಂಗನ್ಯೂನತೆಯನ್ನು ದೇಹದ ಒಟ್ಟು ಭಾಗಕ್ಕೆ ಹೋಲಿಕೆ ಮಾಡಿದ್ದಲ್ಲಿ 1/3 ರಷ್ಟು ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತಮ್ಮ ದೈನಂದಿನ ಕೆಲಸ-ಕಾರ್ಯಗಳನ್ನು ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಕೈಯನ್ನು ಮೇಲೆತ್ತಿ ಕೆಲಸ ಮಾಡಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಅರ್ಜಿದಾರರಿಗೆ ಸಹಾಯ ಮಾಡಲು ಹೆಚ್ಚಿನ ಪ್ರಮಾಣದ ಅಂಗನ್ಯೂನತಾ ಪ್ರಮಾಣ ಪತ್ರ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ಮುಂದಿನ ವೈದ್ಯಕೀಯ ಚಿಕಿತ್ಸೆಗೆ ಹಣ ಖರ್ಚಾಗುವುದಿಲ್ಲ ಎಂದರೆ ಸರಿ. ಅರ್ಜಿದಾರರು ತಮ್ಮ ಮಗುವಿನ ಪಾಲನೆ -ಪೋಷಣೆ ಮಾಡಲು ತೊಂದರೆ ಆಗುತ್ತಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ

**1** ನೇ ಎದುರುದಾರರ ಪರ ವಕೀಲರು **2** ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ